ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ: 080-22343901, 22343980

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.

ಸಂಖ್ಯೆ: ಕಾಶಿಇ/13/ಯು.ಜಿ.ಸಿ/ಮಾನ್ಯತೆ/2018-19.

ದಿನಾಂಕ:27.03.2019

# ಸುತ್ತೋಲೆ

ವಿಷಯ: ಇಎಂಎಸ್ ತಂತ್ರಾಂಶದಲ್ಲಿ ಯುಜಿಸಿ ಮಾನ್ಯತೆ ಕುರಿತ ಮಾಹಿತಿಯನ್ನು ದಾಖಲಿಸುವ ಬಗ್ಗೆ

ಉಲ್ಲೇಖ:
1) ದಿನಾಂಕ:16/03/2019ರ ಸಂಖ್ಯೆ :ಇಡಿ 483 ಯುಎನ್ಇ 2017ರ ಸರ್ಕಾರಿ ಆದೇಶ.
2) ದಿನಾಂಕ:25/03/2019ರ ಸಂಖ್ಯೆ:ಕಾಶಿಇ 206 2016ರ ಯುಜಿಸಿ 2017-18/ಸೇವಿ ಕಛೇರಿ ಟಿಪ್ಪಣಿ

*****

ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಖಾಸಗಿ ಅನುದಾನಿತ ಬಿ.ಎಡ್ ಕಾಲೇಜುಗಳ ಸಹಾಯಕ /ಸಹ ಪ್ರಾಧ್ಯಾಪಕರುಗಳಿಗೆ /ಗ್ರಂಥಪಾಲಕರುಗಳಿಗೆ /ದೈಹಿಕ ಶಿಕ್ಷಣ ಬೋಧಕರುಗಳಿಗೆ 2016ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ಜಾರಿಗೊಳಸಲಾಗುತ್ತಿದ್ದು, ಸದರಿ ಆದೇಶದ ನಿಯಮ 2(VII)ರಲ್ಲಿ ಸೂಚಿಸಿರುವಂತೆ **ಹಾಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಈ ದಿನಾಂಕದ ವರೆಗೆ ಯುಜಿಸಿ ಸಂಸ್ಥೆಯಿಂದ (2ಎಫ್)/(12ಬಿ) ಮಾನ್ಯತೆ ಪಡೆಯದಿರುವ ಬಗ್ಗೆ ಒಟ್ಟು 146 ಸರ್ಕಾರಿ ಪದವಿ ಕಾಲೇಜುಗಳು ಇಎಂಎಸ್ ತಂತ್ರಾಂಶದಲ್ಲಿ ಮಾಹಿತಿಯನ್ನು** ದಾಖಲಿಸಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲರುಗಳು ಸದರಿ ಮಾಹಿತಿಯನ್ನು ಇಎಂಎಸ್ ತಂತ್ರಾಂಶದಲ್ಲಿ ದಿನಾಂಕ:28/03/2019ರ ಪೂರ್ವಾಹ್ನ 1.00 ಗಂಟೆ ಒಳಗೆ ದಾಖಲಿಸಲು ಸೂಚಿಸಿದೆ.

ಖಾಸಗಿ ಅನುದಾನಿತ ಪದವಿ ಕಾಲೇಜುಗಳಿಗೆ ಸಂಬಂಧಿಸಿದಂತೆ ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಸಂಬಂಧಪಟ್ಟ ಕಾಲೇಜುಗಳಿಂದ **ಯುಜಿಸಿ ಸಂಸ್ಥೆಯಿಂದ (2ಎಫ್)/(12ಬಿ) ಮಾನ್ಯತೆ** ಪಡೆದಿರುವ ಕುರಿತು ಮಾಹಿತಿಯನ್ನು ಪಡೆದು, ಕ್ರೋಢೀಕರಿಸಿ ದಿನಾಂಕ:28/03/2019ರ ಅಪರಾಹ್ನ 5.00 ಗಂಟೆ ಒಳಗೆ ಈ ಕಛೇರಿಗೆ ಕಳುಹಿಸಲು ಸೂಚಿಸಿದೆ.

ಒಂದೊಮ್ಮೆ ಸರ್ಕಾರಿ/ ಖಾಸಗಿ ಅನುದಾನಿತ ಪದವಿ ಕಾಲೇಜುಗಳು, ಮಾಹಿತಿಯನ್ನು ಇಎಂಐಎಸ್ ನಲ್ಲಿ ದಾಖಲಿಸದಿದ್ದಲ್ಲಿ / ಒದಗಿಸದಿದ್ದಲ್ಲಿ ಅಥವಾ ತಪ್ಪು ಮಾಹಿತಿಯನ್ನು ನೀಡಿದ್ದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರು/ ಜಂಟಿ ನಿರ್ದೇಶಕರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು

ಇವರಿಗೆ;

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2) ಸಂಬಂಧಪಟ್ಟ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3) ಮ್ಯಾನೇಜರ್, ಸೇವಾ ವಿಭಾಗ, ಕೇಂದ್ರ ಕಛೇರಿ ಬೆಂಗಳೂರು -- ಮಾಹಿತಿಗಾಗಿ
4) ಕಛೇರಿ ಪ್ರತಿ